ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ, ಆಯುಕ್ತರ ಕಛೇರಿ,
ನೃಪತುಂಗ ರಸ್ತೆ, ಬೆಂಗಳೂರು 560001

ಎಂ.ಸಿ.9/ಮ.ಅ.ಸಂ.ಶಾ.ಘೋ/ಆ/01/2015-16 ದಿನಾಂಕ: 04/01/2016

:ಜ್ಞಾಪನ:

ವಿಷಯ: ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸುವ ಕುರಿತು.

ಉಲ್ಲೇಖ: ಸರ್ಕಾರಿ ಆದೇಶ ಸಂಖ್ಯೆ: ಇಡಿ 27 ಮಾಹಿತಿ 2012(ಭಾಗ-1), ಬೆಂಗಳೂರು, ದಿನಾಂಕ: 18-06-2014.

ರವಾನೆ DESPATCH ..01.16

******

ಪ್ರಸ್ತಾವನೆ:

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಮತೀಯ ಆಡಳಿತ ಮಂಡಳಿಯವರು ಸದರಿ ಶಾಲೆಗಳನ್ನು ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸಲು ಪ್ರಸ್ತಾವನೆಯನ್ನು ಸಂಬಂಧಿಸಿದ ಉಪನಿರ್ದೇಶಕರು(ಆಡಳಿತ), ಸಾ.ಶಿ.ಇ, ಇವರಿಗೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಸಂಬಂಧಿಸಿದ ಉಪನಿರ್ದೇಶಕರು(ಆಡಳಿತ), ಸಾ.ಶಿ.ಇ, ಇವರು ಪರಿಶೀಲಿಸಿ ಸ್ಪಷ್ಟ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಆದೇಶ:

ಅದರಂತೆ, ದಿನಾಂಕ: 01-01-2016 ರಂದು ನಡೆದ ಭಾಷಾ/ಮತೀಯ ಅಲ್ಪಸಂಖ್ಯಾತ ಘೋಷಣಾ ಪರಿಶೀಲನಾ ಸಮಿತಿಯ ಸಭೆಯಲ್ಲಿ ಈ ಕೆಳಕಂಡ ಶಾಲೆಗಳ ಪ್ರಸ್ತಾವನೆಯನ್ನು ಪರಿಶೀಲಿಸಿದೆ. ಸದರಿ ಶಾಲೆಗಳ ಆಡಳಿತ ಮಂಡಳಿಯವರು ಉಲ್ಲೇಖಿತ ಸರ್ಕಾರಿ ಆದೇಶದನ್ವಯ ಮತೀಯ ಅಲ್ಪಸಂಖ್ಯಾತ ಶಾಲೆಗಳ ಘೋಷಣಾ ಮಾನದಂಡಗಳನ್ನು ಪೂರೈಸಿ ಸೂಕ್ತ ದಾಖಲೆಗಳನ್ನು ಒದಗಿಸಿರುವುದರಿಂದ ಘೋಷಣಾ ಸಮಿತಿಯು ಈ ಕೆಳಕಂಡ ಅನುದಾನ ರಹಿತ ಶಾಲೆಗಳನ್ನು ಷರತ್ತುಗಳ ಅನ್ವಯ ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸಿ ಆದೇಶಿಸಿದೆ.

| ಕ್ರ ಸಂ | ಆಡಳಿತ ಮಂಡಳಿಯ ವಿವರ | ಶಾಲೆಯ ವಿವರ | ಘೋಷಣೆ ನೀಡಿರುವ ತರಗತಿ | ಶಾಲೆಯ ವಿಧ & ಪಠ್ಯಕ್ರಮ | ಘೋಷಣಾ ಧರ್ಮದ ವಿವರ |
|---|---|---|---|---|---|
| 1 | ಶ್ರೀ ಭಾರತಿ ಶೈಕ್ಷಣಿಕ ಸಂಸ್ಥೆ, ಚಾಮುಂಡಿನಗರ, ಆರ್.ಟಿ.ನಗರ, ಬೆಂಗಳೂರು-32 | ಶ್ರೀ ಭಾರತಿ ಪಬ್ಲಿಕ್ ಶಾಲೆ, ಚಾಮುಂಡಿ ನಗರ, ಆರ್.ಟಿ. ನಗರ, ಬೆಂಗಳೂರು-32 | 1 ರಿಂದ 7ನೇ ತರಗತಿ (ಹಿರಿಯ ಪ್ರಾಥಮಿಕ ಶಾಲೆ) | ಅನುದಾನ ರಹಿತ ರಾಜ್ಯ ಪಠ್ಯಕ್ರಮ | ಮುಸ್ಲಿಂ |
| 2 | ಆರ್.ಟಿ. ನಗರ ವಿಜಯ ಭಾರತಿ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಸ್ಥೆ, ಆರ್.ಟಿ. ನಗರ, ಬೆಂಗಳೂರು-32 | ವಿಜಯಭಾರತಿ ಪಬ್ಲಿಕ್ ಶಾಲೆ, ಚಾಮುಂಡಿನಗರ, ಆರ್.ಟಿ. ನಗರ, ಬೆಂಗಳೂರು-32 | 8 ರಿಂದ 10ನೇ ತರಗತಿ (ಪ್ರೌಢ ಶಾಲೆ) | ಅನುದಾನ ರಹಿತ ರಾಜ್ಯ ಪಠ್ಯಕ್ರಮ | ಮುಸ್ಲಿಂ |
| 3 | ಅರುಳಪ್ಪ ಎಜುಕೇಷನ್ ಟ್ರಸ್ಟ್, ನಂ.1, ರೋಜರ್ಸ್ ರಸ್ತೆ, ರಿಚರ್ಡ್ಸ್ ಟೌನ್, ಬೆಂಗಳೂರು-05 | ಜೆ ಅಂಡ್ ಜೆ ಕಿರಿಯ ಪ್ರಾಥಮಿಕ ಶಾಲೆ, ನಂ.1, ರೋಜರ್ಸ್ ರಸ್ತೆ, ರಿಚರ್ಡ್ಸ್ ಟೌನ್, ಬೆಂಗಳೂರು-05 | 1 ರಿಂದ 5ನೇ ತರಗತಿ (ಕಿರಿಯ ಪ್ರಾಥಮಿಕ ಶಾಲೆ) | ಅನುದಾನ ರಹಿತ ರಾಜ್ಯ ಪಠ್ಯಕ್ರಮ | ಕ್ರಿಶ್ಚಿಯನ್ |

| ಕ್ರ.ಸಂ | ಆಡಳಿತ ಮಂಡಳಿಯ ವಿವರ | ಶಾಲೆಯ ವಿವರ | ಘೋಷಣೆ ನೀಡಿರುವ ತರಗತಿ | ಶಾಲೆಯ ವಿಧ & ಪಠ್ಯಕ್ರಮ | ಘೋಷಣಾ ಧರ್ಮದ ವಿವರ |
|---|---|---|---|---|---|
| 4 | ಜೆಮ್ ಎಜುಕೇಷನ್ ಸೊಸೈಟಿ (ರಿ), ರಹಮತ್ ನಗರ, ಆರ್.ಟಿ. ನಗರ, ಬೆಂಗಳೂರು–32 | ಜೆಮ್ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆ, ಕೆ.ಎಚ್.ಎಂ ಬ್ಲಾಕ್, ಆರ್.ಟಿ. ನಗರ, ಬೆಂಗಳೂರು–32 | 1 ರಿಂದ 7ನೇ ತರಗತಿ (ಹಿರಿಯ ಪ್ರಾಥಮಿಕ ಶಾಲೆ) | ಅನುದಾನ ರಹಿತ ರಾಜ್ಯ ಪಠ್ಯಕ್ರಮ | ಮುಸ್ಲಿಂ |
| 5 | ಅಲ್ ಅಮೀನ್ ಎಜುಕೇಷನ್ ಸೊಸೈಟಿ, ಲಾಲ್ ಬಾಗ್ ಮೈನ್ ಗೇಟ್ ಹತ್ತಿರ, ಬೆಂಗಳೂರು–27 | ಅಲ್ ಅಮೀನ್ ಅಲ್ಲಾಬಾದ್ ಉರ್ದು ಹಿರಿಯ ಪ್ರಾಥಮಿಕ ಶಾಲೆ, ಯಾದ್ಗಾರ್ ಮೊಹಲ್ಲಾ, ಟಿ.ಕೆ. ರಸ್ತೆ, ಚನ್ನಪಟ್ಟಣ, ರಾಮನಗರ ಜಿಲ್ಲೆ | 1 ರಿಂದ 5ನೇ ತರಗತಿ (ಕಿರಿಯ ಪ್ರಾಥಮಿಕ ಶಾಲೆ) | ಅನುದಾನ ರಹಿತ ರಾಜ್ಯ ಪಠ್ಯಕ್ರಮ | ಮುಸ್ಲಿಂ |
| 6 | ಕೆಥೋಲಿಕ್ ಶಿಕ್ಷಣ ಮಂಡಳಿ, ಬಜ್ಜೋಡಿ, ಕುಲಶೇಖರ ಅಂಚೆ, ಮಂಗಳೂರು | ಸೈಂಟ್ ಆನ್ಸ್ ಆಂಗ್ಲ ಮಾಧ್ಯಮ ಪ್ರೌಢ ಶಾಲೆ, ಕಡಬ, ಪುತ್ತೂರು ತಾಲ್ಲೂಕು, ದಕ್ಷಿಣ ಕನ್ನಡ | 8 ರಿಂದ 10ನೇ ತರಗತಿ (ಪ್ರೌಢ ಶಾಲೆ) | ಅನುದಾನ ರಹಿತ ರಾಜ್ಯ ಪಠ್ಯಕ್ರಮ | ಕ್ರಿಶ್ಚಿಯನ್ |
| 7 | ಅಲ್ ಅಮೀನ್ ಎಜುಕೇಷನ್ ಸೊಸೈಟಿ, ಲಾಲ್ ಬಾಗ್ ಮೈನ್ ಗೇಟ್ ಹತ್ತಿರ, ಬೆಂಗಳೂರು–27 | ಅಲ್ ಅಮೀನ್ ಉರ್ದು ಹಿರಿಯ ಪ್ರಾಥಮಿಕ ಶಾಲೆ, ದೇವರ ಜೀವನ ಹಳ್ಳಿ, ಬೆಂಗಳೂರು–45 | 1 ರಿಂದ 7ನೇ ತರಗತಿ (ಹಿರಿಯ ಪ್ರಾಥಮಿಕ ಶಾಲೆ) | ಅನುದಾನ ರಹಿತ ರಾಜ್ಯ ಪಠ್ಯಕ್ರಮ | ಮುಸ್ಲಿಂ |
| 8 | ಕೆಥೋಲಿಕ್ ಶಿಕ್ಷಣ ಮಂಡಳಿ, ಬಜ್ಜೋಡಿ, ಕುಲಶೇಖರ ಅಂಚೆ, ಮಂಗಳೂರು | ಸೈಂಟ್ ಥೋಮಸ್ ಅನುದಾನರಹಿತ ಆಂಗ್ಲ ಮಾಧ್ಯಮ ಪ್ರೌಢ ಶಾಲೆ, ಅಲಂಗಾರು, ಮೂಡಬಿದ್ರೆ, ಮಂಗಳೂರು ತಾ. ದ.ಕ. | 8 ರಿಂದ 10ನೇ ತರಗತಿ (ಪ್ರೌಢ ಶಾಲೆ) | ಅನುದಾನ ರಹಿತ ರಾಜ್ಯ ಪಠ್ಯಕ್ರಮ | ಕ್ರಿಶ್ಚಿಯನ್ |

ಷರತ್ತುಗಳು:

1. ಶಾಲೆಗಳನ್ನು ನಡೆಸುವ ಆಡಳಿತ ಮಂಡಳಿಯು ಟ್ರಸ್ಟ್/ಸೊಸೈಟಿ ಕಾಯಿದೆ ಪ್ರಕಾರ ನೋಂದಣಿಯಾಗಿರಬೇಕು ಮತ್ತು ಕಾಲಕಾಲಕ್ಕೆ ನವೀಕರಿಸಬೇಕು.
2. ಶಾಲೆಯ ಆಡಳಿತ ಮಂಡಳಿಯ ಸದಸ್ಯರು ಕಾರ್ಯಕಾರಿ ಸಮಿತಿಯಲ್ಲಿದ್ದರೆ, ಆಯಾ ಮತೀಯ ಅಲ್ಪಸಂಖ್ಯಾತ ಸದಸ್ಯರ ಸಂಖ್ಯೆ ಕನಿಷ್ಠ ಮೂರನೇ ಎರಡರಷ್ಟಿರಬೇಕು.
3. ಶಾಲೆಯನ್ನು ನಡೆಸುವ ಮತೀಯ ಅಲ್ಪಸಂಖ್ಯಾತ ಆಡಳಿತ ಮಂಡಳಿಯ ಸದಸ್ಯರು ಕಾರ್ಯಕಾರಿ ಸಮಿತಿಯಲ್ಲಿದ್ದರೆ, ಸದರಿ ಸದಸ್ಯರು ಸಂಬಂಧಿಸಿದ ತಹಶೀಲ್ದಾರರಿಂದ ಜಾತಿ ಪ್ರಮಾಣ (ಧರ್ಮ ನಮೂದಿಸಿರಬೇಕು) ಪತ್ರವನ್ನು ಪಡೆದಿರಬೇಕು.
4. ಮತೀಯ ಅಲ್ಪಸಂಖ್ಯಾತರು ನಡೆಸುತ್ತಿರುವ ಪ್ರಾಥಮಿಕ ಶಾಲೆ/ ಪ್ರೌಢ ಶಾಲೆಗಳನ್ನು ನಡೆಸಲು ಕರ್ನಾಟಕ ಶಿಕ್ಷಣ ಕಾಯ್ದೆಯಡಿಯಲ್ಲಿ ಇಲಾಖೆಯಿಂದ ನೋಂದಾಯಿಸಿರಬೇಕು ಮತ್ತು ಕಾಲಕಾಲಕ್ಕೆ ಶಾಲಾ ಮಾನ್ಯತೆಯನ್ನು ನವೀಕರಿಸಿರಬೇಕು.
5. ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಣೆಗೊಂಡ ಶೈಕ್ಷಣಿಕ ವರ್ಷದಿಂದ 3 (ಮೂರು) ವರ್ಷಗಳಿಗೊಮ್ಮೆ ಘೋಷಣಾ ಪತ್ರ ನವೀಕರಿಸಲು ಅಗತ್ಯ ದಾಖಲೆಗಳೊಂದಿಗೆ ಪ್ರಸ್ತಾವನೆಯನ್ನು ಸಮುಚಿತ ಮಾರ್ಗದಲ್ಲಿ ಸಲ್ಲಿಸುವುದು.
6. ಮತೀಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯವರು ನಡೆಸುತ್ತಿರುವ ಶಾಲೆಗಳಲ್ಲಿ ಆಯಾಯ ಮತೀಯ ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಆಯಾ ವರ್ಷದಲ್ಲಿ ಕನಿಷ್ಠ ಶೇ. 25 ಶೈಕ್ಷಣಿಕ ದಾಖಲಾತಿ ಹೊಂದಿರಬೇಕು.